ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯ,
ಕೊಪ್ಪ

**ಸಿ. ಸಿ. ನಂ.761/2021**

**ಪಿರ್ಯಾಧಿದಾರರು:** ರಾಜ್ಯದ ಪರವಾಗಿಃ ಕೊಪ್ಪ ಪೋಲೀಸರು

**-ವಿರುದ್ಧ-**

| | | |
|---|---|---|
| ಆರೋಪಿತರು | 1 | ರವಿ ಜಿ. ಬಿನ್ ಗೋಪಾಲ, 33 ವರ್ಷ, ಕೂಲಿ ಕೆಲಸ, ವಾಸ ದೇವನ್ ಎಸ್ಟೇಟ್, ಕೊಪ್ಪ |
| | 2 | ಕಾಶಿನಾಥ ಆರ್ ಬಿನ್ ರಾಮ (**ಮೃತಪಟ್ಟಿರುತ್ತಾರೆ**) |
| | 3 | ಮಂಜುನಾಥ್ ಬಿನ್ ಕೊರಗ (**ಮೃತಪಟ್ಟಿರುತ್ತಾರೆ**) |
| | 4 | ಚೇತನ ಬಿನ್ ಚಂದ್ರಶೇಖರ್, 25 ವರ್ಷ, ಮುಯೂರ ವೈನ್ಸ್ ನೌಕರ, ವಾಸ ಕಾಗಲಗೋಡು, ನಾರ್ವೆ, ಕೊಪ್ಪ ತಾಲ್ಲೂಕು. |

**ದೋಷಾರೋಪಣೆ**

ಶ್ರೀಮತಿ ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ, ಬಿ.ಕಾಂ., ಎಲ್.ಎಲ್.ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ಕೊಪ್ಪ, ಆದ ನಾನು ಮೇಲ್ಕಂಡ *1* ಮತ್ತು *4*ನೇ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ *02.09.2020* ರಂದು ಸಂಜೆ *05.35* ಗಂಟೆ ಸಮಯದಲ್ಲಿ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಕೊಪ್ಪ – ಮೇಲ್ಪಾಲ್, ಬಿಂತ್ರವಳ್ಳಿ ರಸ್ತೆಯಲ್ಲಿ *1*ನೇ ಆರೋಪಿಯಾದ ನೀವು *2* ಮತ್ತು *3*ನೇ ಆರೋಪಿತರೊಂದಿಗೆ ಸೇರಿಕೊಂಡು ಅಕ್ರಮವಾಗಿ ಸರ್ಕಾರದ ಯಾವುದೇ ಪರವಾನಿಗೆ ಇಲ್ಲದೆ *ಕೆಎ-20/ಎಂ-8087* ಮಾರುತಿ *800* ಕಾರಿನಲ್ಲಿ *90* ಎಂ.ಎಲ್.ನ *Captain Martins Special whisky* ಯ *48* ಮದ್ಯ ತುಂಬಿದ ಪೌಚ್‌ಗಳನ್ನು ಸ್ವಾಧೀನ ಹೊಂದಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ *32*ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದೂ,

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ *1*ನೇ ಆರೋಪಿಯಾದ ನೀವು *2* ಮತ್ತು *3*ನೇ ಆರೋಪಿತರೊಂದಿಗೆ ಸೇರಿಕೊಂಡು ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಮೇಲೆ ಹೇಳಿದ ಮದ್ಯವನ್ನು

7/12

ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಹೊಂದಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯಿದೆ ಕಲಂ 34ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದೂ,

4ನೇ ಆರೋಪಿಯಾದ ನೀವು ಪರವಾನಿಗೆಯ ನಿಯಮಗಳನ್ನು ಉಲ್ಲಂಘನೆ ಮಾಡಿ 1ನೇ ಆರೋಪಿಗೆ ಮದ್ಯವನ್ನು ಮಾರಾಟ ಮಾಡಲು ಮೇಲ್ಕಂಡಂತೆ ಮದ್ಯದ ಪೌಚುಗಳನ್ನು ನೀಡಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 36(ಬಿ)ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

5/12/2024

(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

Ravi

<u>ದೋಷಾರೋಪಣೆ</u>

ಪ್ರ-1ಃ ಈ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉಃ ಆ-1 ಅರ್ಥವಾಯಿತು

ಆ-4 "

ಪ್ರ-2ಃ ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ನಿಮಗೆ ಏನಾದರೂ ಪ್ರತಿರಕ್ಷೆ ಇದೆಯೇ?

ಉಃ ಆ-1 ಒಪ್ಪಿಕೊಳ್ಳುವುದಿಲ್ಲ ವಿಚಾರಣೆ ಬಯಸುತ್ತೇವೆ

ಆ-4 " " "

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ 1 ಮತ್ತು 4 ನೇ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 7/12/2024

7/12/2024
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

Ravi

ಆರೋಪಿತರ ಸಹಿಃ